ನಂದಾದೀಪ

# ಸಂತೂರ್ ಸಂತ



## ನೂರು ತಂತಿ, ಒಂದು ನಾದ!

ಸಂತೂರ್ ವಾದನದ ಮೂಲಕ ದೇಶ ವಿದೇಶಗಳಲ್ಲಿ ಸಂಗೀತಪ್ರಿಯರ ಮನಗೆದ್ದ ಅದ್ಭುತ ಸಂತೂರ್ ವಾದಕ ಪಂ. ಶಿವಕುಮಾರ್ ಶರ್ಮಾ ನಾದಲೋಕದಿಂದ (ಜನನ ಜನವರಿ 13, 1938– ನಿಧನ ಮೇ 12, 2022) ಅಸ್ತಂಗತರಾಗಿದ್ದಾರೆ. ಇದರೊಂದಿಗೆ ಸಂಗೀತದ ಪ್ರಮುಖ ಕೊಂಡಿಯೊಂದು ಕಳಚಿದಂತಾಗಿದೆ.

■ **ಉಮಾ ಅನಂತ್**

ಮಣೆಯಂತಿರುವ ಅಗಲವಾದ ಮರದ ತುಂಡಿನ ಮೇಲೆ ನೂರು ತಂತಿಗಳನ್ನು ಜೋಡಿಸಿ ಎರಡು ಸಣ್ಣ ಕೋಲಿನ ಸಹಾಯದಿಂದ ಮಧುರಾತಿಮಧುರ ನಾದವನ್ನು ತರುವ ಸಂತೂರ್ ವಾದನ ಕೇಳಲು ಆಪ್ಯಾಯಮಾನ. ದೇಶದ ತುತ್ತತುದಿ ಜಮ್ಮುವಿನಲ್ಲಿ ಹುಟ್ಟಿದ ಒಂದು ಜಾನಪದ ವಾದ್ಯ ಸಂತೂರ್‌ನಲ್ಲಿ ಹಿಂದೂಸ್ತಾನಿ ಸಂಗೀತವನ್ನು ಅಳವಡಿಸಿ ಜನಪ್ರಿಯಗೊಳಿಸಿದವರು ಪಂ. ಉಮಾದತ್ತ ಶರ್ಮಾ. ಇದೇ ವಾದ್ಯವನ್ನು ಕೊಂಚ ಮಾರ್ಪಾಡು ಮಾಡಿ ನೂರು ತಂತಿಯನ್ನು ತೊಂಬತ್ತಕ್ಕಿಳಿಸಿ, ವಾದನದ ಘಮಲನ್ನು ಮತ್ತಷ್ಟು ಇಂಪಾಗಿಸಿದವರು 'ಸಂತೂರ್ ಸಂತ'ನೆಂದೇ ಹೆಸರಾದ ಪಂ. ಶಿವಕುಮಾರ್ ಶರ್ಮಾ. ಸಂತೂರ್ ಎಂದರೆ ಶಿವಕುಮಾರ್ ಶರ್ಮಾ ಎಂಬಷ್ಟು ಈ ವಾದ್ಯಕ್ಕೆ ಅನ್ವರ್ಥನಾಮವಾಗಿದ್ದವರು ಈ ಮೇರು ವಾದಕ!

ಹಾಗೆ ನೋಡಿದರೆ ಸಂತೂರ್ ಪುರಾತನ ವಾದ್ಯವೇನಲ್ಲ. ಇದಕ್ಕೆ ಹೆಚ್ಚಿನ ಇತಿಹಾಸವೂ ಇಲ್ಲ. ಸುಮಾರು 60 ವರ್ಷಗಳ ಹಿಂದೆಯಷ್ಟೇ ಬೆಳಕಿಗೆ ಬಂದ ವಾದ್ಯವಿದು. ಅಲ್ಲದೆ ಸಂತೂರ್ ವಾದ್ಯವು ಇತರ ತಂತಿವಾದ್ಯಗಳಾದ ಸಿತಾರ್, ಸರೋದ್, ಸಾರಂಗಿ, ಪಿಟೀಲು, ವೀಣೆಗಳಂತೆ ಅಲ್ಲ. ನುಡಿಸಾಣಿಕೆಯೂ ಅತ್ಯಂತ ವಿಭಿನ್ನ. ನಾದವೂ ಆಕರ್ಷಕ. ಈ ವಾದ್ಯಕ್ಕೆ 'ಶತತಂತಿ

## ನಾದಸ್ವರೂಪಿ ನನ್ನ ಗುರು!

ಪಂ. ಶಿವಕುಮಾರ್ ಶರ್ಮಾ ಅವರ ಹಿರಿಯ ಶಿಷ್ಯ ಮುಂಬಯಿಯಲ್ಲಿರುವ ಪಂ. ಸತೀಶ್ ವ್ಯಾಸ್ ಸುಮಾರು 45 ವರ್ಷಗಳ ಕಾಲ ಒಡನಾಡಿಯಾಗಿದ್ದು, ತಮ್ಮ ಗುರುವಿನ ಬಗ್ಗೆ ನೆನಪುಗಳನ್ನು 'ಸುಧಾ'ದೊಂದಿಗೆ ಹಂಚಿಕೊಂಡಿದ್ದಾರೆ.

ಸುಮಾರು ಐವತ್ತು ವರ್ಷಗಳ ಹಿಂದೆ ಒಮ್ಮೆ ತಂದೆಯವರೊಡನೆ ಮುಂಬಯಿಯಲ್ಲಿ ಪಂ. ಶಿವಕುಮಾರ ಶರ್ಮಾ ಅವರ ಕಛೇರಿ ಕೇಳಲು ಹೋಗಿದ್ದೆ. ಸಂತೂರ್ ನಾದ ನನ್ನನ್ನು ಅಕ್ಷರಶಃ ಕಟ್ಟಿಹಾಕಿತು. ಕಛೇರಿಯ ಬಳಿಕ ಅವರನ್ನು ಭೇಟಿ ಮಾಡಿದೆ. ಅಪ್ಪಟ ನಾದಸ್ವರೂಪಿ ಆದ ಪಂ. ಶರ್ಮಾ ಅವರನ್ನು ನೋಡಿದಾಗ ಏನೋ ಒಂದು ರೀತಿಯ ಪುಳಕ. ಕಲಿಯುವುದಾದರೆ ಸಂತೂರ್ ಅನ್ನೇ – ಅದೂ ಪಂ. ಶರ್ಮಾ ಅವರ ಬಳಿಯೇ ಕಲಿಯಬೇಕು ಎಂದು ತೀರ್ಮಾನಿಸಿ, ತಂದೆಯ ಮನವೊಲಿಸಿ, ಪಂ. ಶರ್ಮಾ ಅವರ ಶಿಷ್ಯತ್ವ ಪಡೆದೆ. ಸುಮಾರು 20 ವರ್ಷ ಕಾಲ ಗುರುಗಳ ಬಳಿ ತಾಲೀಮು ನಡೆಸಿದೆ. ಒಟ್ಟು 45 ವರ್ಷಗಳ ಕಾಲದ ಗುರುಗಳೊಂದಿಗಿನ ಒಡನಾಟ ನನಗೆ ಸಂಗೀತ, ವಾದನ, ನಿರ್ದೇಶನ, ರಾಗ ಸಂಯೋಜನೆಗಳಲ್ಲದೆ ಅಗಾಧವಾದ ಜೀವನಾನುಭವ, ಸಾಮರಸ್ಯದ ಬದುಕು ಮುಂತಾದವುಗಳನ್ನು ಕಲಿಸಿದೆ. ಸಂತೂರ್ ನುಡಿಸಾಣಿಕೆಯ ತಾಂತ್ರಿಕ ಅಂಶಗಳಾದ ಗಮಕ, ಮೀಂಡ್, ಆಂದೋಲನ್‌ಗಳಲ್ಲಿ ಅವರ ಪ್ರಯೋಗ ಕೂಡ ಕೇಳುಗರಲ್ಲಿ ವಿಶಿಷ್ಟ ಅನುಭೂತಿ ಮೂಡಿಸುತ್ತಿತ್ತು. ಇದನ್ನು ಅವರು ನನಗೂ ಕಲಿಸಿದ್ದರು.

ಒಮ್ಮೆ ಪುಣೆಯ ಓಶೊ ಆಶ್ರಮದಲ್ಲಿ ಒಂದು ಸಂಗೀತ ಕಛೇರಿ ಏರ್ಪಾಡಾಗಿತ್ತು. ಅಲ್ಲಿ ನನ್ನ ತಂದೆ ಪಂ. ಸಿ.ಆರ್. ವ್ಯಾಸ್ ಅವರ ಗುರು ಪಂ. ಜಗನ್ನಾಥ ಬುವಾ ಪುರೋಹಿತ್ ಸಂಯೋಜನೆ ಮಾಡಿದ್ದ ರಾಗ 'ಜೋಗ್ ಕೌನ್ಸ್' ಅನ್ನು ಒಂದೂವರೆ ಗಂಟೆ ಕಾಲ ನುಡಿಸಿದ್ದರು. ಉಸ್ತಾದ್ ಜಾಕೀರ್ ಹುಸೇನ್ ತಬಲಾ ಸಾಥಿ ನೀಡಿದ್ದರು. ಈ ಕಛೇರಿ ಎಲ್ಲರನ್ನೂ ಧ್ಯಾನಸ್ಥ ಸ್ಥಿತಿಗೆ ಕೊಂಡೊಯ್ದಿತು. ನುಡಿಸಲು ಕಷ್ಟವಿರುವ ಒಂದು ತಂತಿ ವಾದ್ಯದಲ್ಲಿ ನಿರಂತರವಾಗಿ ಒಂದೇ ರಾಗವನ್ನು ದಳದಳವಾಗಿ ಅರಳಿಸುತ್ತಾ,